## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.

## ಸಿ.ಸಿ. ನಂ.3049/2021

ದಿನಾಂಕ : 12.12.2024

| | | |
|---|---|---|
| ಹೆಸರು | : ಕೇಶವ | ಸಿಡಬ್ಲ್ಯು - 10 |
| ತಂದೆ ಹೆಸರು | : ಚನ್ನಕೇಶವಯ್ಯ | ಪಿ ಡಬ್ಲ್ಯೂ - 04 |
| ವಯಸ್ಸು | : 24 ವರ್ಷ | |
| ಉದ್ಯೋಗ | : ವಿದ್ಯಾರ್ಥಿ | |
| ವಾಸಸ್ಥಳ | : ಹಿರೇಕೆರೆ ಗ್ರಾಮ | ಪ್ರಮಾಣ ವಚನ ಬೋಧಿಸಲಾಯಿತು. |

### ಮುಖ್ಯ ವಿಚಾರಣೆ : ಮಾನ್ಯ ಎ.ಪಿ.ಪಿ. ರವರಿಂದಃ

ಸಾಕ್ಷಿಯು ನಿಪಿ.1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸದರಿ ಸಹಿಯನ್ನು ನಿಪಿಃ 1(ಬಿ) ಅಂತ ಗುರುತಿಸಲಾಯಿತು. ಸದರಿ ಸಹಿಯನ್ನು 2021 ರಲ್ಲಿ ನಾಯಕನಹಟ್ಟಿ ಠಾಣೆಯಲ್ಲಿ ಮಾಡಿರುತ್ತೇನೆ. ಚಾಸಾ-1 ರವರು ಹೇಳಿದಂತೆ ನಿಪಿ.1 ರ ದೂರನ್ನು ನಾನು ಬರೆದಿರುತ್ತೇನೆ. ನನಗೆ ದೂರಿನಲ್ಲಿರುವ ವಿಷಯದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಚಾಸಾ-1 ರವರು ಹೇಳಿದಂತೆ ನಿಪಿ.1 ನ್ನು ಬರೆದಿರುತ್ತೇನೆ. ನಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

### ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ

ದಿನಾಂಕ 09.07.2021 ರಂದು ಕೆಎ-16 ಡಿ-3834 ವಾಹನದಲ್ಲಿ ಚಾಸಾ-1 ಮತ್ತು ಅವರ ಮಗಳು ಸುಷ್ಮಿತ ಆರೋಪಿಯೊಂದಿಗೆ ಪ್ರಯಾಣಿಸುತ್ತಿದ್ದಾಗ, ಆರೋಪಿಯು ಅತೀ ವೇಗ ಮತ್ತು ಅಜಾಗರೂಕತೆಯಿಂದ ವಾಹನವನ್ನು ಚಾಲನೆ ಮಾಡಿದ್ದರಿಂದ ವಾಹನದಲ್ಲಿ ನಿಂತಿದ್ದ ಸುಷ್ಮಿತ ಆಯ ತಪ್ಪಿ ಕೆಳಗೆ ಬಿದ್ದಿದ್ದರಿಂದ ಹಣೆಗೆ ಮತ್ತು ಮುಖಕ್ಕೆ ಬಲವಾದ ಪೆಟ್ಟು ಬಿದ್ದು ಮೃತಳಾಗಿವುದಕ್ಕೆ ಸಂಬಂಧಿಸಿದಂತೆ ದೂರನ್ನು ನೀಡಲಾಗಿರುತ್ತದೆ ಎಂದರೆ ಸರಿ. ಚಾಸಾ-1 ರವರು ನಾಯಕನಹಟ್ಟಿ ಆಸ್ಪತ್ರೆಯಲ್ಲಿ ಸುಷ್ಮಿತಳಿಗೆ ಚಿಕಿತ್ಸೆಯನ್ನು ಕೊಡಿಸಿ ನಂತರ ಚಿತ್ರದುರ್ಗ ಆಸ್ಪತ್ರೆಗೆ ದಾಖಲಿಸಿರುವ ಬಗ್ಗೆ ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸುಷ್ಮಿತ ದಿನಾಂಕ 09.07.2021 ರಂದು ಮೃತರಾಗಿರುತ್ತಾರೆಂದು ಚಾಸಾ-1 ರವರು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದು ಚಾಸಾ-1 ರವರು ತಿಳಿಸಿರುತ್ತಾರೆ

ಎಂದರೆ ಸರಿಯಲ್ಲ. ದಿಃ 19.07.2021 ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯನ್ನು ನಿಪಿ.15 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಚಾರ ನನಗೆ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಶ್ರೀ ವಿ.ಜಿ.ಪಿ., ಆರೋಪಿ ಪರ ವಕೀಲರಿಂದ ಃ**

ಪ್ರಕರಣದ ಬಗ್ಗೆ ನನಗೆ ಖುದ್ದು ಮಹಿತಿ ಇಲ್ಲ ಎಂದರೆ ಸರಿ. ಚಾಸಾ-1 ರವರು ನನ್ನ ಸಂಬಂದಿಕರಾಗಿದ್ದು ಸದರಿಯವರು ದೂರನ್ನು ಬರೆದು ಕೊಡಲು ಹೇಳಿದ್ದರಿಂದ ನಾನು ನಿಪಿ.1 ನ್ನು ಬರೆದಿರುತ್ತೇನೆ ಎಂದರೆ ಸರಿ. ಅಪಘಾತವು ಯಾರ ತಪ್ಪಿನಿಂದ ಸಂಭವಿಸಿರುತ್ತದೆ ಎಂಬ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸರಿ. ಅಪಘಾತ ಪಡಿಸಿದ ವಾಹನದ ನೊಂದಣಿ ಸಂಖ್ಯೆ ಹಾಗೂ ಅದರ ಚಾಲಕನ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

**ಮರು ವಿಚಾರಣೆ** ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

C/c ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.